# ದಲಿತ ಸಾಹಿತ್ಯದ ಸ್ವರೂಪ : ಒಂದು ವಿವೇಚನೆ

ಪೂರ್ಣಿಮಾ ನಾಗನಾಥರಾವ
(ಸಂಶೋಧನಾ ವಿದ್ಯಾರ್ಥಿ)
ಕನ್ನಡ ಅಧ್ಯಯನ ಸಂಸ್ಥೆ
ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.
ಮೊ. ನಂ. ೯೦೩೬೨೫೫೧೪೪೨

**ಪ್ರಸ್ತಾವನೆ:**

ರಸ ಭಾವನುಭಾವದ ಸುಂದರ ಅಭಿವ್ಯಕ್ತಿಯೇ ಸಾಹಿತ್ಯವಾಗಿದೆ. ಸಾಹಿತ್ಯ ಬದುಕು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಇವರೆಡು ಬಿಡಿಸಲಾರದಷ್ಟು ಹಾಸುಹೊಕ್ಕಾಗಿವೆ. ಮನುಷ್ಯನ ಜೀವಂತಿಕೆಯನ್ನು ಗುರುತಿಸಲು ಉಸಿರು ಎಷ್ಟು ಮುಖ್ಯವೋ. ಬದುಕನ್ನು ಸಾಗಿಸಲು ಸಾಹಿತ್ಯವೂ ಕೂಡ ಅಷ್ಟೇ ಮುಖ್ಯವಾಗಿದೆ. ಸಾಹಿತ್ಯ ಪ್ರತಿಯೊಬ್ಬ ವ್ಯಕ್ತಿಯ ಮುಖಗನ್ನಡಿಯಾಗಿ ಹಿಂಬಾಲಿಸುತ್ತದೆ. ಹಾಗೆಯೇ ಆಯಾ ಜನಾಂದಗ ಭಾಷೆ, ಸಂಸ್ಕೃತಿ, ಪರಿಸರ, ಸಂಪ್ರದಾಯ, ನಂಬಿಕೆ, ಆಚರಣೆಗಳು ಸಾಹಿತ್ಯದ ಅಂತರಾಳದಲ್ಲಿ ಒಳಗೊಂಡಿರುತ್ತವೆ. ಹೀಗೆ ಕನ್ನಡ ಸಾಹಿತ್ಯವು ಹಲವಾರು ಕಾಲಘಟಕಗಳನ್ನು ಮೆಟ್ಟಿ (ಸಾಗಿಬಂದಿದೆ) ನಿಂತು ವೈವಿದ್ಯಮಯವಾಗಿ ಗೋಚರಿಸುತ್ತಾ ಬಂದಿದೆ. ಜನಸಮಾನ್ಯರ ಆಶೋತ್ತರಗಳು ವಾಸ್ತವಿಕ ಸಂದರ್ಭಕ್ಕನುಗುಣವಾಗಿ ಪ್ರತಿಬಿಂಬಿಸುತ್ತಾ. ಬದುಕಿನ ಅನನ್ಯ ಸಂಗತಿಗಳನ್ನು ಕಟ್ಟಿಕೊಡುತ್ತ ಹುಲುಸಾಗಿ ಬೆಳೆದುಕೊಂಡು ಬಂದಿದೆ.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಕಾಲಘಟ್ಟಗಳಾದ ನವೋದಯ, ಪ್ರಗತಿಶೀಲ, ನವ್ಯ ಮತ್ತು ದಲಿತ-ಬಂಡಾಯ ಕಾಲಘಟ್ಟಗಳು ಅತ್ಯಂತ ಕ್ರೀಯಾಶೀಲವಾಗಿ, ಚಿಂತನಾತ್ಮಕ, ವೈಚಾರಿಕ ಚಿಂತನೆಗಳನ್ನು ಹುಟ್ಟುಹಾಕಿಕೊಂಡು ಬಂದಿರುವುದು ಕನ್ನಡ ಸಾಹಿತ್ಯವನ್ನು ಅವಲೋಕನ ಮಾಡಿದಾಗ ಮನದಟ್ಟವಾಗುತ್ತದೆ.

ಕಥೆ, ಕಾದಂಬರಿ, ನಾಟಕ ಕಾವ್ಯದ ಮೂಲಕ ಅಸಮಾನತೆ ತೆಗೆದುಹಾಕುತ್ತಾ ಮಾನವೀಯ ಮೌಲ್ಯಗಳನ್ನು ಜನಮನದಲ್ಲಿ ಬಿತ್ತುತ್ತ ಸಾಗಿರುವುದು ಮೂಲಭೂತವಾಗಿ ಸಾಹಿತ್ಯ ಮತ್ತು ಸಮಾಜದಲ್ಲಿ ಬೇರುಬಿಟ್ಟುವ ಘಟ್ಟಭದ್ರ ಹಿತಾಸಕ್ತರ ನಿದ್ದಡಗಿಸಲು ವರ್ಗ ಹೋರಾಟ ತರಲು ಜನಪರವಾದ ಕಾಳಜಿ ಹೋರಾಟ ಮಾಡಿಸಲು ಮಾತಿಲ್ಲದವರ ಧ್ವನಿಯಾಗಲು ೧೯೭೦ರಲ್ಲಿ ಅಂದರೆ ೭೦ರ ದಶಕದ ಸಂದರ್ಭದಲ್ಲಿ ನವೋತ್ತರ ಸಾಹಿತ್ಯ ಪಂಥವೆಂದು ಕರೆಯಲಾಗುವ ಸಾಹಿತ್ಯವೇ ದಲಿತ ಸಾಹಿತ್ಯ.

**ದಲಿತ ಶಬ್ದದ ವಿವೇಚನೆ ಮತ್ತು ದಲಿತ ಸಾಹಿತ್ಯದ ವ್ಯಾಖ್ಯಾನಗಳು:**

ದಲಿತ ಎಂಬ ಶಬ್ದದ ವಿವೇಚನೆ ಮತ್ತು ವ್ಯಾಖ್ಯಾವು ತುಂಬ ಸಂಕೀರ್ಣವು ಮತ್ತು ವ್ಯಾಪಕಾರ್ಥದಿಂದ ಕುಡಿದ್ದಾಗಿದೆ. ಆದರೂ ಹಲವಾರು ಲೇಖಕರು ಶಬ್ದಾರ್ಥ ನಿರ್ಣಯಕ್ಕೆ ಶ್ರಮಿಸಿದ್ದಾರೆ.

ಮೊದಲಿಗೆ ಶಬ್ದಕೋಶಗಳಲ್ಲಿ ನೀಡಲಾಗಿರುವ ಅರ್ಥವನ್ನು ನೋಡುವುದಾದರೆ,

'ಕೀಟಲ್ ಶಬ್ದಕೋಶದಲ್ಲಿ': ದಲಿತ ಎಂದರೆ **st, Split, etc, Opened, unfolded blown.**

'ಕನ್ನಡ ಕಸ್ತೂರಿ ಕೋಶದಲ್ಲಿ': ದಲಿತ ಎಂದರೆ ದಲಿತ ಸಂ, ಒಡೆದ ಅರಳಿದ ಬಿರಿದ, ಮರ್ದಿಸಲ್ಪಟ್ಟ, ಸೋಲಿಸಲ್ಪಟ್ಟ ಎಂಬ ಅರ್ಥಗಳಿವೆ.

'ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟಿನಲ್ಲಿ': ದಲಿತಃ ದಳಿತ- ಹಿಂದುಳಿದವನು ದಮನಕ್ಕೆ ಒಳಗಾದವನು, ಶೋಷಿತ ಜನ ಆರ್ಥಿಕವಾಗಿ ಸಾಮಾಜಿಕವಾಗಿ ಕೆಳಮಟ್ಟದವರು.

'ದಲಿತ' ಪದವನ್ನು ಕುರಿತು 'ದೇವಯ್ಯ ಹರವೆ' ಹೀಗೆ ವ್ಯಾಖ್ಯಾನಿಸುತ್ತಾರೆ: 'ಅಸ್ಪೃಶ್ಯ ಜನಾಂಗಕ್ಕೆ ಇಂಡಿಯಾದಾದ್ಯಂತ ಹೊಂದಿಕೆಯಾಗಬಹುದಾದ ಒಂದೇ ಒಂದು ಪದ 'ದಲಿತ' ಎಂಬುದು ಮಾತ್ರ.

'ಡಾ. ವಿ ಮುನಿವೆಂಕಟಪ್ಪ' : ದಲಿತ ಎಂದರೆ ಯಾರು ಹುಟ್ಟಿನಿಂದ ಅಸ್ಪೃಶ್ಯರಾಗಿದ್ದು, ನಿರಂತರವಾಗಿ ದಲಿತ ಮನೋಧರ್ಮವನ್ನು ಮೈಗೂಡಿಸಿಕೊಂಡು ದಲಿತಪರ ಕಾಳಜಿಯನ್ನು ಕಾಯ್ದುಕೊಳ್ಳುತ್ತಾರೋ ಅವನೇ ದಲಿತ.

'ಅರವಿಂದ ಮಾಲಗತ್ತಿಯವರ' ವಿವೇಚನೆ ಹೀಗಿದೆ: ಶತಮಾನಗಳಿಂದ ಜನಸಮುದಾಯದಲ್ಲಿ ಆರ್ಥಿಕ, ಸಾಮಾಜಿಕ, ರಾಜಕೀಯ ಮತ್ತು ಶೈಕ್ಷಣಿಕವಾಗಿ ಒಳಗಾದವರು. ಒಟ್ಟು ಮನುಷ್ಯ ಸಮಾಜದಲ್ಲಿ ಬದುಕಲಾರದೆ, ಊರ ಹೊರಗೆ ವಾಸಿಸಿ. ಕೀಳು ವೃತ್ತಿಗೆ ಅವಲಂಬಿತರಾಗಿ ಹೆಸರು ಹೇಳಿಕೊಳ್ಳಲು ನಾಚಿಕೆ ಪಡುವ ಅಸ್ಪೃಶ್ಯರು ಅಥವಾ ಬಹಿಷ್ಕೃತರೆನಿಸಿಕೊಂಡವರೆಲ್ಲರೂ ದಲಿತರೆನಿಸಿಕೊಳ್ಳುತ್ತಾರೆ.

ಹಾಗೆಯೇ ದಲಿತ ಸಾಹಿತ್ಯದ ವ್ಯಾಖ್ಯಾನಗಳು' ನೋಡುವುದಾದರೆ 'ದಲಿತ ಸಾಹಿತ್ಯ' ವೆಂದರೆ ಹುಟ್ಟಿನಿಂದ ಅಸ್ಪೃಶ್ಯನಾದವನೊಬ್ಬ ಬರೆದ ಜನಪರ ಸಾಹಿತ್ಯ ಎಂದಿಟ್ಟುಕೊಳ್ಳಲಾಗಿದೆ. ಸಾಹಿತ್ಯದ ದೃಷ್ಟಿಯಿಂದ ಇದಕ್ಕೆ ಒಂದು ಬಗೆಯ ಅನನ್ಯತೆ ಪ್ರಾಪ್ತಿಸುತ್ತದೆ. ಇದರಂತೆ 'ದೇವಯ್ಯ ಹರವೆಯವರು' ದಲಿತ ಸಾಹಿತ್ಯವನ್ನು ಕುರಿತು ಈ ರೀತಿ ವ್ಯಾಖ್ಯಾನಿಸುತ್ತಾರೆ: ದಲಿತ ಸಾಹಿತ್ಯದಲ್ಲಿ ಮನುಷ್ಯ ಮತ್ತು ಆತನ ನೋವುಗಳು ಕೇಂದ್ರಬಿಂದುವಾಗಿರುತ್ತವೆ. ಮನುಷ್ಯನ ನೋವು ಇವನ ಸಂಕೋಲೆಯ ಘಟನೆಗಳು ಜಾತಿಯತೆಯಿಂದ ಉಂಟಾಗುವ ಸಮಸ್ಯೆಗಳು ಈ ಕಾರಣಕ್ಕಾಗಿ ಪಡುವ ಯಾತನ ಮನುಷ್ಯನ ನಡುವಿರುವ ಅಡ್ಡಗೋಡೆಗಳು ಮತ್ತು ಅವುಗಳ ಹಿನ್ನಲೆ ಅವುಗಳೆಲ್ಲದರ

ಇತಿಹಾಸ ಮೂಲಗಳನ್ನು ಅತ್ಯಂತ ಯಶಸ್ವಿಯಾಗಿ ಜಾನಪದ ಮಾಧ್ಯಮ ಮತ್ತು ಭಾಷೆಯ ಮುಖಾಂತರ ಸೃಷ್ಟಿಮಾಡುತ್ತಾನೆ. ಸಾಹಿತ್ಯದ ಮೂಲಕ ಈ ಎಲ್ಲ ನೋವಿನ ಚಿತ್ರಣವನ್ನು ದಲಿತರ ಮುಂದಿಡುತ್ತ ತಮ್ಮಗಳ ಮತ್ತು ತಮ್ಮ ಬದುಕಿನ ಹಿನ್ನೆಲೆಯನ್ನು ಅರಿತುಕೊಂಡು ಹೊಸ ಸಾಮಾಜಿಕ ಮನುಷ್ಯನ ಜೊತೆಯಲ್ಲಿ ಹೆಜ್ಜೆಗಳನ್ನಿಡುವಂತೆ ಮಾಡುವುದು ಒಂದು ಕಡೆಯಾದರೆ, ಸವರ್ಣಯ ಹಿಂದುಗಳಿಗೆ ಇಂಥ ಚಿತ್ರಣವನ್ನು ಕೊಡುವುದರ ಮೂಲಕ ತಾವು ಮಡಿದ ತಪ್ಪಿನ ಅರಿವನ್ನು ಮೂಡಿಸುವುದು ಹಾಗೂ ಶೋಷಿತ ಜನತೆಯ ಜೀವನದ ಬಗ್ಗೆ ಭಯ ಮತ್ತು ಅನುಕಂಪವನ್ನು ಹುಟ್ಟಿಸುವುದು ಮತ್ತೊಂದು ಮಹತ್ವದ ಉದ್ದೇಶವಾಗಿದೆ. ಇಂಥ ಒಂದು ಸಾಹಿತ್ಯ ಐತಿಹಾಸಿಕ ಪ್ರಜ್ಞೆಯುಳ್ಳ ದಲಿತ ಜನಾಂಗದ ಮಾತ್ರ ವಿವರಗಳನ್ನು ಅನುಭವಿಸಿದ ಹಾಗೂ ಅನುಭವಿಸುತ್ತಿರುವ ದಲಿತನಿಂದ ಮಾತ್ರ ಸೃಷ್ಟಿಯಾಗುತ್ತದೆ. 'ಎಲ್. ಹನುಮಂತ್ಯ' : ಅವರು ದಲಿತ ಸಾಹಿತ್ಯ ಕುರಿತು ಹೇಳುವುದು ಹೀಗೆ ಜಾತಿಯ ಅಸಮಾನತೆಯಿಂದುಂಟಾದ ಅವಮಾನ, ಬಡತನದಿಂದ ಬದುಕು ಬರ್ಬರಗೊಂಡ ರೀತಿಯನ್ನು ಸಮರ್ಪಕವಾಗಿ ಮನಸ್ಸುಗಳಿಗೆ ನಾಟುವಂತೆ ಚಿತ್ರಿಸಬಲ್ಲವರಾದರೆ ಅದು ಯಶಸ್ವಿ ಕಾವ್ಯವಾಗುತ್ತದೆ. 'ಚಂದ್ರಶೇಖರ ಪಾಟೀಲ': ಈ ರೀತಿ ವ್ಯಾಖ್ಯಾನಿಸಿದ್ದಾರೆ, ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಶತಮಾನಗಳಿಂದ ಶೋಷಣೆಗೆ, ಅವಮಾನಕ್ಕೆ ಕ್ರೌರ್ಯಕ್ಕೆ ಬಲಿಯಾದ ದಲಿತ ಪ್ರಜ್ಞಾವಂತ ಲೇಖಕ ಬರೆದ ಪ್ರತಿಭಟನಾ ಸಾಹಿತ್ಯವೇ ಅಥೆಂಟಿಕ ಆದ ದಲಿತ ಸಾಹಿತ್ಯ.

**ದಲಿತ ಸಾಹಿತ್ಯ:**

ನವೋದಯ-ನವ್ಯ ಪಂಥಗಳು ಪಾಶ್ಚಾತ್ಯ ಸಾಹಿತ್ಯ ಮತ್ತು ಸಂಸ್ಕೃತಿಯ ಪ್ರಭಾವದಿಂದ ಹುಟ್ಟಿಕೊಂಡವುಗಳಾಗಿವೆ. 'ನವ್ಯದ ಅಭಿವ್ಯಕ್ತಿ ವಿಧಾನಗಳು ಸಾಹಿತ್ಯದಲ್ಲಿ ತಾತ್ವಿಕ ಬಿಕ್ಕಟ್ಟನ್ನು ೭೦ರ ದಶಕದಲ್ಲಿ ಉಂಟುಮಾಡಿತು. ಅದರಿಂದಾಗಿ ಸಾಮಾಜಿಕ, ರಾಜಕೀಯ, ಆರ್ಥಿಕ ಚಳುವಳಿಗಳು, ದಲಿತ-ಅಸ್ಪೃಶ್ಯರು, ಹಿಂದೂಳಿದ ವರ್ಗಗಳಿಗೆ ಮೂಡಿದ ಎಚ್ಚರದ ಪರಿಣಾಮವಾಗಿ ದಲಿತ-ಸಾಹಿತ್ಯ ಪಂಥದ ಹುಟ್ಟಿಗೆ ಕಾರಣವಾಯಿತು.' ಸಮಾಜವಾದಿ ಚಿಂತನೆಯಲ್ಲಿ ಯುವಬರಹಗಾರರು, ಸಾಹಿತಿಗಳು ತಮ್ಮ ಅರಿತವಾದ ಬರವಣಿಗೆಯ ಮೂಲಕ ಶೋಷಿತ ಜನ ಸಮುದಾಯವನ್ನು ಸಾಮಾಜಿಕ ನ್ಯಾಯಕ್ಕಾಗಿ ಹೋರಾಡುವಂತೆ ಜಾಗೃತಿಯನ್ನುಂಟು ಮಾಡಿತು. ನವ್ಯ ಸಾಹಿತ್ಯದಿಂದಾಗಿ ಕಳೆದುಕೊಂಡಿದ್ದ ಓದುಗರನ್ನು ಸರಳ ಬರವಣಿಗೆಯ ಮೂಲಕ ಮತ್ತೆ ಮರಳಿ ಪಡೆಯಬೇಕೆಂಬ ಆಶಯದೊಂದಿಗೆ ಸಹಜವಾಗಿ ಆಡುಮಾತಿನೊಂದಿಗೆ, ಕೇರಿಯ ಭಾಷೆಯನ್ನು ಬಳಿಸಿಕೊಂಡು ಸಾಹಿತ್ಯವನ್ನು ಹುಟ್ಟುಹಾಕಿದರು. ಅದರಲ್ಲಿ ದಲಿತರ ನೋವು ಸಂಕಟ, ಆಕ್ರೋಶ, ಹೋರಾಟದಿಂದ ವ್ಯಕ್ತಗೊಂಡ

ಸಾಹಿತ್ಯವೇ ದಲಿತ ಸಾಹಿತ್ಯದ ಬೆಳಕಾಗಿ ಹೊರಹೊಮ್ಮಿತು. ಬಂಡವಾಳಶಾಹಿ, ಅಧಿಕಾರಶಾಹಿ, ಪುರೋಹಿತಶಾಹಿಯ ಕಪಿಮುಷ್ಠಿಯಿಂದ ಅನ್ಯಾಯದಿಂದ ಹೊರಬರಲು, ಪ್ರತಿಭಟನಾತ್ಮಕವಾದ ಪ್ರಗತಿಪರ ಚಿಂತನಾಧರಿತ ಸಾಹಿತ್ಯ ರಚನೆಗೊಂಡಿತು.

ಭಾರತೀಯ ಸಮಾಜದಲ್ಲಿ ಮಡುಗಟ್ಟಿ ನಿಂತಿರುವ ಜಾತಿ, ಅಸಮಾನತೆ, ದೌರ್ಜನ್ಯ, ಅಪಮಾನದ ವ್ಯವಸ್ಥೆಯ ವಿರುದ್ಧ ಸಿಡಿದೆದ್ದ ಸಾಹಿತ್ಯ, ದಲಿತ ಸಾಹಿತ್ಯ, ದೇವರು, ಧರ್ಮರೂಢಿ ಸಂಪ್ರದಾಯಗಳೆಲ್ಲ ತಳಬುಡವಿಲ್ಲದ ಕಲ್ಪನೆಗಳು, ಬದಕನ್ನು ಹಸನುಗೊಳಿಸಲಾರವೆಂದು ಅರ್ಥೈಸಿಕೊಂಡು, ಬದುಕು ಮಾತ್ರ ಸತ್ಯ ಬದುಕುವ ದಾರಿಗಳು ಸತ್ಯ ಎನ್ನುವ ಇಂದ್ರೀಯಗಳ ತಳಹದಿಯ ಮೇಲೆ ನಿಂತ ಸಾಹಿತ್ಯವೇ ಬಂಡಾಯ ಸಾಹಿತ್ಯ ಸಮಾಜದಲ್ಲಿನ ವರ್ಗಭೇದ, ಜಮೀನ್ದಾರಿ ಪದ್ದತಿ, ಬಂಡವಾಳಶಾಹಿ ವ್ಯವಸ್ಥೆ, ದಬ್ಬಾಳಿಕೆ, ಸ್ತ್ರೀ ಶೋಷಣೆ ಅರ್ಥರಹಿತ ಮೂಢನಂಬಿಕೆಗಳ ಆಚರಣೆ ಮುಂತಾದವುಗಳ ವಿರುದ್ಧ ಎಲ್ಲೆಡೆ ಪ್ರತಿಭಟನೆ ಕಾಣಿಸತೊಡಗಿದವು. ಹೀಗೆ ಸಾಹಿತ್ಯದಲ್ಲಿ ಅನ್ಯತೆಗಳನ್ನು ಅರಿತುಕೊಂಡು ಕಲೆಗಿಂತ ತಮ್ಮ ಪರಿಸರದ ಕುಂದುಕೊರತೆಗಳ ವಿಷಯವೇ ಮುಖ್ಯವೆಂದು ಭಾವಿಸಿಕೊಂಡರು. ಅದಕ್ಕಾಗಿಯೇ ಈ ಕಾಲಘಟ್ಟದ ಸಾಹಿತ್ಯದಲ್ಲಿ ಶೋಷಣೆ ಬಡತನ, ಹಸಿವು, ಸಾಮಾಜಿಕ ಅನ್ಯಾಯ, ಮೇಲ್ವರ್ಗಗಳ ದೌರ್ಜನ್ಯ, ಬಡವರ ಮುಗ್ಧತೆ ಕುರಿತು ಕಥಾ ವಸ್ತುಗಳಾದ ಕಥೆ, ಕವನ, ಕಾದಂಬರಿ, ನಾಟಕಗಳು ರಚನೆಗೊಂಡದ್ದು ಇಲ್ಲಿ ಕಾಣಬಹುದಾಗಿದೆ.

ಬಂಡಾಯ ಸಾಹಿತ್ಯವು, ಸಾಹಿತ್ಯ ಮತ್ತು ಸಂಘಟನೆ ಎರಡೂ ರೂಪಗಳಲ್ಲಿ ಕರ್ನಾಟಕದಾದ್ಯಂತ ಇಂದು ಪ್ರಬಲವಾಗಿ ಬೆಳೆದುಕೊಂಡು ಬಂದಿರುವಂಥದ್ದು ಕಾಣಬಹುದಾಗಿದೆ. ಸಮಾಜ ಮುಖಿ ಚಿಂತನೆ, ಬದುಕನ್ನು ಉತ್ತಮ ರೀತಿಯಲ್ಲಿ ನಿರ್ಮಾಣಗೊಳಿಸುವ ಧ್ಯೇಯೋದ್ದೇಶದಿಂದ ಹೊರಡಿದ್ದು ಬಂಡಾಯಸಾಹಿತ್ಯ. ಬಂಡಾಯ ಎಂಬುದು ಅದೊಂದು ಮನೋಧರ್ಮ, ಸಾಮಾಜಿಕ ಪರಿಸರದಲ್ಲಿ ದಲಿತ ಸಾಹಿತ್ಯ ಆರಂಭದಲ್ಲಿ ಸಹಜವಾಗಿ ಸಿಟ್ಟು ಮತ್ತು ರೊಚ್ಚು ಅವಮಾನಗಳ ನ್ಯಾಯ ಹೊರಹಾಕುವಾಗ ಅಬ್ಬರದಿಂದಲೇ ಬರಹಕ್ಕಿಳಿಯಬೇಕಾಗಿತ್ತು. ಅದರ ಅವಶ್ಯಕತೆಯೂ ಅಂದು ಮುಖ್ಯವಾಗಿತ್ತು. ಶತಶತಮಾನಗಳಿಂದ ನೋವು-ಕಷ್ಟ ಅವಮಾನ, ಶೋಷಣೆ ಸಹಿಸಿಕೊಂಡು ದಿನಗಳನ್ನು ಕಳೆದದ್ದನ್ನು ಹೊರಜಗತ್ತಿಗೆ ತಿಳಿಸುವ, ಮನವರಿಕೆ ಮಾಡಿಸುವ ನಿಟ್ಟಿನಲ್ಲಿ ಅದರ ಆಕ್ರಂದನ, ಸಿಟ್ಟು, ರೊಚ್ಚು, ಸೇಡುವಿನ ನೋವನ್ನು ಹೊರಹಾಕಿದರು. ಸ್ವತಂತ್ರವಾಗಿ ಮೈಚಳಿ ಬಿಟ್ಟು ಬರೆಯಲು ಆರಂಭಿಸಿದ್ದು ಒಂದು ರೀತಿಯಲ್ಲಿ ಪ್ರಗತಿಶೀಲದವರ ಧೋರಣೆಯನ್ನೇ ಪ್ರತಿಪಾದಿಸಿಕೊಂಡು ಬಂದದ್ದು ಕಂಡುಬರುತ್ತದೆ. ಆದರೆ ವಿಷಯ, ವಸ್ತುವನ್ನು ದಲಿತ-ಬಂಡಾಯದವರು ನೋಡುವ ದೃಷ್ಟಿಕೋನ ವಿಭಿನ್ನ ನೆಲೆಯಲ್ಲಿ

ಯೋಚಿಸುವಂತೆ ಮಾಡಿತು. ಈ ಕಾಲ ಘಟ್ಟದಲ್ಲಿ ಬದುಕಿನ ವಿವಿಧ ಆಯಾಮಗಳು ತೆರೆದುಕೊಂಡವು. ಬಂಡಾಯ ಸಾಹಿತ್ಯ ಹುಟ್ಟುವುದಕ್ಕಿಂತ ಮುಂಚೆ ಹಲವಾರು ಮುಖ ಕಾಣಿಸಿಕೊಂಡು ತನ್ನದೆಯಾದ ಧೋರಣೆ, ಧ್ಯೇಯೋದ್ದೇಶದೊಂದಿಗೆ. ಸಾಹಿತಿ ರಚನೆಗೆ ತೊಡಗಿಸಿಕೊಂಡಿತು. ಅಂತವರಲ್ಲಿ ಮುಂಚೂಣಿ ಸಾಹಿತ್ಯಗಳಾದ ಬೆಸಗರಹಳ್ಳಿ ರಾಮಣ್ಣ, ದೇವನೂರು ಮಹಾದೇವ, ಬರಗೂರು ರಾಮಚಂದ್ರಪ್ಪ, ಕಾಳೇಗೌಡ ನಾಗವಾರ, ಯಶ್ವಂತ ಚಿತ್ತಾಲ, ಸಿದ್ಧಲಿಂಗಯ್ಯ, ಪಿ. ಲಂಕೇಶ, ಮುಳ್ಳೂರು ನಾಗರಾಜ, ಅರವಿಂದ ಮಾಲಗತ್ತಿ, ಚೆನ್ನಣ್ಣ ವಾಲೀಕಾರ, ಕುಂ. ವಿರಭದ್ರಪ್ಪ, ಸೋಮಣ್ಣ ಹೊಂಗಳಿಯವರು, ಮ.ನ. ಜವರಯ್ಯ, ಪ್ರೊ. ಎಚ್.ಟಿ.ಪೋತೆ. ಮೂಡ್ನಾಗೂಡ ಚೆನ್ನಸ್ವಾಮಿ, ಪುರುಷೋತ್ತಮ ಬಿಳಿಮಲೆ, ಬಿ.ಟಿ. ಲಲಿತಾ ನಾಯಕ, ರಾಜಶೇಖರ ನಿರಮಾನ್ವಿ, ಅಮರೇಶ ನುಗಡೋಣಿ, ರಾಜಶೇಖರ ಹತಗುಂದಿ, ಕೆ.ನೀಲಾ ಮುಂತಾದವರ ಕಥೆ, ಕಾದಂಬರಿ, ಕಾವ್ಯಗಳಲ್ಲಿ ಈ ಪಂಥದ ಧೋರಣೆಗಳು ಕಂಡುಬರುತ್ತವೆ.

ಸಮಾರೋಪ:

ಭಾರತೀಯ ಪ್ರಜೆಗಳಾದ ನಾವು ಸಾರ್ವಭೌಮ, ಸಮಾನತೆ, ಪ್ರಜಾಸತ್ತಾತ್ಮಕ, ಜಾತ್ಯಾತೀತ, ಸಮಾಜವಾದಿ ಚಿಂತನೆಗಳಿಂದ ಎಲ್ಲ ವರ್ಗದ ಜನರು ನಿರಾಂತಕವಾಗಿ ಜೀವಿಸುವಂತಾಗಬೇಕು. ಶಾಂತಿ, ಸಹನೆ, ನೆಮ್ಮದಿ, ಸಮಾನತೆಯಿಂದ ಐಕ್ಯತೆ ಮನೋಭಾವದಿಂದ ಬದುಕಬೇಕೆಂಬ ಹೆಬ್ಬಯಕೆಯನ್ನು ಹೊತ್ತ ಡಾ. ಅಂಬೇಡ್ಕರ್ ಅವರ ಚಿಂತನೆಗಳು ಕಥೆ, ಕಾದಂಬರಿ, ನಾಟಕ, ಕಾವ್ಯಗಳ ರೂಪದಲ್ಲಿ ಹೊರಹೊಮ್ಮುತ್ತಿರುವುದು ಇಂದು ನಾವು ಕಾಣಬಹುದಾಗಿದೆ. ಇದು ಜೀವಂತಿಕೆಯ ಲಕ್ಷಣವೂ ಕೂಡ ಎಂದು ಹೆಮ್ಮೆಯಿಂದ ಹೇಳಬಹುದು. ಅಷ್ಟೇ ಅಲ್ಲದೇ ನಾಡಿನ ಜನರ ಸಾಂಸ್ಕೃತಿಕ ಬದುಕಿನ ರೀತಿ-ನೀತಿ, ಬದುಕಿನ ವಿಧಾನ, ನಂಬಿಕೆ ಮುಂತಾದ ರಸವತ್ತಾದ, ದಿನನಿತ್ಯದ ಬದುಕಿಗೆ ಹತ್ತಿರವಾದ ವಿವರಗಳನ್ನೊಳಗೊಂಡ ವಸ್ತುವನ್ನು ಒಳಗೊಂಡು ಬಹುತೇಕ ಕಥೆ, ಕಾದಂಬರಿ, ಕಾವ್ಯ, ನಾಟಕ ಒಡಲಲ್ಲಿ ಮೂಡಿಬಂದಿವೆ. ಗ್ರಾಮೀಣ ಜನರ ಜ್ವಲಂತ ಸಮಸ್ಯೆ, ಧಾರ್ಮಿಕ ವಿಚಾರಗಳು, ಅಸ್ಪೃಶ್ಯತೆ, ಬಹಿಷ್ಕಾರ, ಅನ್ಯಾಯ, ಅವಮಾನ ಸಂಕಟ, ಹಲ್ಲೆಗಳಿಂದ ನರಕ ಜೀವನ ನಡೆಸುವಂತ ಜನ ಜೀವನದ ಚಿತ್ರಣವನ್ನು ಚಿತ್ರಿಸಿ, ಅದಕೆ ಪ್ರುತಿಯಾಗಿ ದಿಟ್ಟದೆಯಿಂದ ಸಂಕಷ್ಟ ಎದುರಿಸಿ ಸಂಕಟನಾತ್ಮಕ ಚಿಂತನೆಯಿಂದ ಪ್ರತಿಭಟಿಸಿ, ಧನಾತ್ಮಕ ಆಲೋಚನೆಯೊಂದಿಗೆ ಮುನ್ನಡೆಯಬೇಕು ಅಂದಾಗ ಬದುಕು ಸಾರ್ಥಕ ಮತ್ತು ಸುಖಕರವಾಗುತ್ತದೆ ಎಂಬುದನ್ನು ಪರಿಹಾರಾತ್ಮಕ ಚಿಂತನೆಯನ್ನು ಹುಟ್ಟುಹಾಕುವಲಿ ದಲಿತ ಸಾಹಿತ್ಯದ ಸಾಹಿತಿಕ ನಿಲುವುಗಳು ಅತ್ಯಂತ ಮೌಲ್ಯಯುತ್ತವಾಗಿವೆ ಎಂದೇ ಹೇಳಬಹುದಾಗಿದೆ.

**ಆಕರ ಗ್ರಂಥಗಳು:**

೧. ಕನ್ನಡ ಸಾಹಿತ್ಯ ಚರಿತ್ರೆ- ರಂ. ಶ್ರೀ. ಮುಗಳ, ಸಮಾಜ ಪುಸ್ತಕಾಲಯ, ಧಾರವಾಡ

೨. ಹೊಸಗನ್ನಡ ಸಾಹಿತ್ಯ ಚರಿತ್ರೆ ಎಲ್. ಎಸ್. ಶೋಷಗಿರಿರಾವ

೩. ಕನ್ನಡದಲ್ಲಿ ದಲಿತ ಬಂಡಾಯ ಕಾದಂಬರಿಗಳು- ಡಾ. ಚಂದ್ರಶೇಖರ

೪. ಚನ್ನಣ್ಣ ವಾಲೀಕಾರ- ದಲಿತ-ಬಂಡಾಯ ಸಾಹಿತ್ಯದಲ್ಲಿ ಜಾನಪದೀಯತೆ

೫. ಪುರುಷೋತ್ತಮ ಬಿಳಿಮಲೆ- ಬಂಡಾಯ-ದಲಿತ ಅರ್ಥವ್ಯಾಪ್ತಿ.

೬. ಸಾಹಿತ್ಯ ಮತ್ತು ಸಮಾಜ - ಪ್ರೊ. ಎಚ್.ಟಿ. ಪೋತೆ